<u>ಅಸಲು ದಾವಾ:-</u> 242/2021 ಪಿ.ಡಬ್ಲ್ಯೂ:- 1

ದಿನಾಂಕಃ 16.01.2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ಪ್ರತಿವಾದಿಗಳ ಪರ ಶ್ರೀ.ಕೆ ಎಸ್ ಕೆ ವಕೀಲರಿಂದ</u>

ನಾನು ಎಷ್ಟು ವರ್ಷಗಳಿಂದ ಶಿವಮೊಗ್ಗದಲ್ಲಿ ವಾಸವಾಗಿದ್ದೇವೆ ಎಂದರೆ ಸಾಕ್ಷಿಯು ನಾವು ಶಿವಮೊಗ್ಗದಲ್ಲಿ ವಾಸವಾಗಿಲ್ಲ ಎಂದು ನುಡಿಯುತ್ತಾರೆ. ನಿಪಿ 5 ಕ್ರಯಪತ್ರವನ್ನು ಯಾವ ವಿಚಾರಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಿ ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ಜಮೀನಿಗೆ ಸಂಬಂಧಿಸಿದಂತೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ 5 ರ ಕ್ರಯಪತ್ರವನ್ನು ಯಾರು ಯಾರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಅಜ್ಜಿ ಕರಿಯಮ್ಮರವರು ಬನ್ನಿಕೆರೆ ಕರಿಯಮ್ಮರವರಿಂದ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನಗೆ ಕನ್ನಡ ಓದಲು ಬರುತ್ತದಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ 5 ಕ್ರಯಪತ್ರದಲ್ಲಿ ಕರಿಯಮ್ಮ ಖರೀದಿ ಮಾಡಿದ್ದಾರೆ ಎಂದು ಉಲ್ಲೇಖ ಇದೆಯಾ ಎಂದರೆ ಸಾಕ್ಷಿಯು ನಮ್ಮ ತಂದೆಯವರನ್ನು ಬಿಟ್ಟು ಕ್ರಯಪತ್ರ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ 5 ಕ್ರಯಪತ್ರದಲ್ಲಿ ನಮ್ಮ ಅಜ್ಜಿ ಕರಿಯಮ್ಮ ಬನ್ನಿಕೆರೆ ಕರಿಯಮ್ಮರವರಿಂದ ಆಸ್ತಿ ಖರೀದಿ ಮಾಡಿದ್ದಾರೆ ಎಂದು ಉಲ್ಲೇಖ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಿಃ 23.12.1972 ರಲ್ಲಿ 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿ ಗಂಡ ಖರೀದಿ ಮಾಡಿರುವ ಆಸ್ತಿಗೆ ಸಂಬಂಧಿಸಿದಂತೆ ನಿಪಿ 5 ದಾಖಲೆ ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ 5 ಕ್ರಯಪತ್ರ ಆಗುವ ಸಮಯಕ್ಕೆ 2 ನೇ ಪ್ರತಿವಾದಿಯ ಗಂಡ ಹನುಮಂತಪ್ಪ 10 ವರ್ಷದ ಮೈನರ್ ಎಂದರೆ ಸರಿ. ಸಾಮಾನ್ಯವಾಗಿ ಯಾರಾದರೂ ಮೈನರ್ ಇದ್ದರೆ ಅವರ ಪರವಾಗಿ ಮೈನರ್ ಗಾರ್ಡಿಯನ್ ಎಂದು ದಾಖಲೆಯಲ್ಲಿ ಸೇರಿಸುತ್ತಾರೆ ಎಂದರೆ ಸರಿ. ನಿಪಿ 5 ಕ್ರಯಪತ್ರದ ಪ್ರಕಾರ 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿ ಗಂಡನ ಹೆಸರಿಗೆ ಆರ್ ಟಿ ಸಿ ಮತ್ತು ಮ್ಯುಟೇಷನ್ ಆಗಿರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿಯ ಗಂಡ ಯಾವಾಗ ತೀರಿಕೊಂಡಿರುತ್ತಾರೆ ಎಂದರೆ 2016. 2 ನೇ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 19.01.2009 ರಲ್ಲಿ ನಾನು ಕ್ಯಾಸಿನಕೆರೆ ವ್ಯವಸಾಯ ಸೇವಾ ಸಹಕಾರ ಸಂಘ ದಲ್ಲಿ ಸಾಲ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಆ ಸಮಯದಲ್ಲಿ ನನ್ನ ಚಿಕ್ಕಪ್ಪರಾದ 2 ನೇ ಪ್ರತಿವಾದಿಯ ಗಂಡ ಮರಣ ಹೊಂದಿರುತ್ತಾರೆ ಎಂದು ಸಾಲ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಕ್ಯಾಸಿನಕೆರೆ ವ್ಯವಸಾಯ ಸೇವಾ ಸಹಕಾರ ಸಂಘ ದಲ್ಲಿ ಸಾಲ ಪಡೆದುಕೊಂಡಿರುವ ಬಗ್ಗೆ ನ್ಯಾಯಾಲಯದಲ್ಲಿ ದಾಖಲೆ ಹಾಜರುಪಡಿಸಿದರೆ ನನ್ನದು ತಕರಾರು ಇಲ್ಲ ಎಂದರೆ ಸರಿ. 1 ನೇ ದಾವಾ ಸ್ವತ್ತು ಮಾತ್ರ ಪಿತ್ರಾರ್ಜಿತ ಆಸ್ತಿ ಎಂದರೆ ಸಾಕ್ಷಿಯು 2 ದಾವಾ ಸ್ವತ್ತುಗಳು ಸಹ ಪಿತ್ರಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ವಾದಿ ಪ್ರತಿವಾದಿಗಳು ಈಗಲೂ ಸಹ ಪ್ರತ್ಯೇಕವಾಗಿ ವಾಸಮಾಡುತ್ತಿದ್ದೀರಿ ಎಂದರೆ ಸರಿ. ನಮ್ಮ ಅಜ್ಜಿಯನ್ನು 1 ಮತ್ತು 2 ನೇ ಪ್ರತಿವಾದಿಯರು ಸಾಕಿ ಸಲಹಿರುತ್ತಾರೆ ಎಂದರೆ ಸಾಕ್ಷಿಯು ಎಲ್ಲರೂ ಸೇರಿ ಸಾಕಿರುತ್ತೇವೆ ಎಂದು ನುಡಿಯುತ್ತಾರೆ. ಒಟ್ಟು ಕುಟುಂಬದ ಮನೆಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. 1 ನೇ ದಾವಾ ಸ್ವತ್ತಿನಲ್ಲಿ ಮಾತ್ರ ನನಗೆ ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು 2 ದಾವಾ ಸ್ವತ್ತುಗಳಲ್ಲಿಯೂ ಸಹ ಹಕ್ಕು ಇರುತ್ತದೆ ಎಂದು ನುಡಿಯುತ್ತಾರೆ. 2 ನೇ ದಾವಾ ಸ್ವತ್ತು ನಮ್ಮ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಆದರೆ ಅದು ನಮ್ಮ ಪಿತ್ರಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ವಾದಿಗಳಿಗೆ 2 ನೇ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಸಂಬಂಧಿಸಿದ 2 ನೇ ದಾವಾ ಆಸ್ತಿಯನ್ನು ದಾವೆಯಲ್ಲಿ ಸೇರಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ